# ಕಥೋಪದೇಶ



# ಮಾಯೆಯ ಪ್ರಭಾವ

ಸಂಗ್ರಹ: ಎನ್. ಗೋಪಿನಾಥ, ಶಿವಮೊಗ್ಗ ; ಚಿತ್ರ: ಬಿ.ಕೆ.ಸೋಮಶೇಖರ್, ಬೆಂಗಳೂರು

ನಾರದರು ಒಮ್ಮೆ ವಿಷ್ಣುವನ್ನು ಪ್ರಾರ್ಥಿಸಿದರು: "ಭಗವಂತ, ನನಗೆ ನಿನ್ನ ಮಾಯೆ ತೋರಿಸು." ವಿಷ್ಣು ನಸುನಗುತ್ತಾ, "ಆಗಲಿ, ಅದಕ್ಕೆ ಮೊದಲು ಸ್ವಲ್ಪ ಪ್ರಯಾಣ ಮಾಡುವಿಯಂತೆ ಬಾ" ಎಂದು ಅವರನ್ನು ಕರೆದುಕೊಂಡು ಗರುಡನನ್ನೇರಿದ. ಇಬ್ಬರೂ ಒಂದು ಸುಂದರ ಅರಣ್ಯಪ್ರದೇಶಕ್ಕೆ ಬಂದರು. ಅಲ್ಲಿ ಒಂದು ನದಿ ಹರಿಯುತ್ತಿತ್ತು. ಅದನ್ನು ನೋಡಿ ವಿಷ್ಣು ಹೇಳಿದ: "ಈ ನದಿಯಲ್ಲಿ ಸ್ನಾನ ಮಾಡಿ ದಣಿವಾರಿಸಿಕೊಳ್ಳೋಣ. ಮೊದಲು ನೀನು ಮುಳುಗುಹಾಕು." ನಾರದರು ನದಿಯಲ್ಲಿ ಮುಳುಗು ಹಾಕಿ ಎದ್ದ ಕೂಡಲೇ ದೈವೀಮಾಯೆಯಿಂದ ಅವರ ದೇಹ ಕರಗಿ ಒಂದು ಸುಂದರ ಯುವತಿಯಾಗಿ ಮಾರ್ಪಟ್ಟರು. ಅಲ್ಲಿ ವಿಷ್ಣುವೂ ಇರಲಿಲ್ಲ, ಆಕೆಗೆ ಹಿಂದಿನ ನೆನಪೂ ಇರಲಿಲ್ಲ. ಈ ರೀತಿ ಏಕಾಂಗಿಯಾಗಿ ನಿಂತಿದ್ದಾಗ, ತಾಳಧ್ವಜನೆಂಬ ರಾಜ ತನ್ನ ಪರಿವಾರದೊಂದಿಗೆ ಅಲ್ಲಿಗೆ ಬಂದು ಅವಳನ್ನು ಕೇಳಿದ: "ನೀನಾರು?" "ನನಗೆ ಗೊತ್ತಿಲ್ಲ" ಎಂದಳು ಆ ಯುವತಿ. ತಕ್ಷಣವೇ ರಾಜ "ನನ್ನ ರಾಣಿಯಾಗುವೆಯಾ?" ಎಂದು ಕೇಳಿದ. ರಕ್ಷಕರಾರೂ ಇಲ್ಲದ್ದರಿಂದ ಆಕೆಯೂ ಒಪ್ಪಿದಳು. ನಂತರ ಸೌಭಾಗ್ಯ ಸುಂದರಿ ಎಂದು ಪ್ರಖ್ಯಾತಳಾದ ಅವಳು (ತನ್ನ ನಾರದ ಪ್ರಜ್ಞೆಯನ್ನು ಮರೆತು) ಕಾಲಕ್ರಮದಲ್ಲಿ ಹನ್ನೆರಡು ಮಕ್ಕಳನ್ನು ಪಡೆದಳು. ಇಷ್ಟರಲ್ಲಿ ಶತ್ರು ರಾಜ ದಂಡೆತ್ತಿ ಬಂದು ರಾಜನನ್ನು ಸೋಲಿಸಿ, ಸಾಯಿಸಿದ. ಅವಳ ಸಂಸಾರ ನಾಶವಾಯಿತು.

ಈಗ ವಿಷ್ಣು ಒಬ್ಬ ಸಾಧುವಿನ ವೇಷ ಧರಿಸಿ ಅವಳೆಡೆಗೆ ಬಂದು ಹೇಳಿದ: "ಮಗಳೆ, ಏಕೆ ದುಃಖಿಸುವೆ? ಪ್ರಪಂಚದ ರೀತಿಯೇ ಹೀಗೆ. ಹುಟ್ಟಿದವರು ಸಾಯಲೇಬೇಕು. ನೀನು ಅಳುವುದರಿಂದ ಸತ್ತವರಿಗೆ ಏನೂ ಸಹಾಯ ಮಾಡಲಾರೆ. ಬದಲು ಈ ನದಿಯಲ್ಲಿ ಸ್ನಾನ ಮಾಡಿ ಗತಿಸಿದವರ ಆತ್ಮ ಶಾಂತಿಗಾಗಿ ಪ್ರಾರ್ಥಿಸು."

ಸಾಧುವಿನ ಸಲಹೆಯಂತೆ ನದಿಯಲ್ಲಿ ರಾಣಿ ಮುಳುಗು ಹಾಕಿ ಏಳಲು, ಹಿಂದಿನಂತೆ ನಾರದರ ದೇಹ ಮತ್ತು ವ್ಯಕ್ತಿತ್ವವನ್ನು ಪಡೆದಿದ್ದಳು! ಪಕ್ಕದಲ್ಲಿ ವಿಷ್ಣುವೂ ನಗುತ್ತಾ ನಿಂತಿದ್ದನು. ನಾರದರಿಗೆ ನಡೆದಿದ್ದೆಲ್ಲವೂ ಮಾಯೆಯ ವಿಚಿತ್ರ ಕಾರ್ಯದ ಪ್ರಭಾವವೆಂದು ಮನದಟ್ಟಾಯಿತು. ಭಗವಂತನಿಗೆ ಭಕ್ತಿಯಿಂದ ಕೈಜೋಡಿಸಿ ನಮಸ್ಕರಿಸಿದರು.

✡

